ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕಿದಾರನ ಹೆಸರು.	ಸ್ಥಿತಿನ ತಪ್ಶೀಲ್. ಕಟ್ಟಡಗಳು. ಕಟ್ಟಡದ ಹೆಸರು	ಕಟ್ಟಡಗಳು. ಅಂದಾಜು ಕಿಮ್ಮತ್ತು.	ಜಮೀನು. ಸರ್ವೆ ನಂಬರ್ ಅಥವಾ ವಿಸ್ತೀರ್ಣ ಹೆಸರು.	ಜಮೀನು. ಖುಷ್ಕಿ ತರೀ ಅಥವಾ ಬಾಗಾಯತು.	ಜಮೀನು. ವಿಸ್ತೀರ್ಣ. ಎಕರೆ.	ಜಮೀನು. ವಿಸ್ತೀರ್ಣ. ಗುಂಟೆ.	ಜಮೀನು. ಅಕಾರ. ರೂ.	ಜಮೀನು. ಅಕಾರ. ಆ.	ಜಮೀನು. ಅಕಾರ. ಪೈ.	ಸರ್ಕಾರಕ್ಕೆ ಬರಬೇಕಾದ ಸೋಪಸ್ ಸಹಿತವಾದ ಬಾಕಿ ಹೊಬಲುಗ. ರೂ.	ಆ.	ಪೈ.
1	2	3	4	5	6	7	8	9		10			11		
ಕೃಷ್ಣರಾಜನಗರ	ಹೆಬ್ಬಳ್ಳಿ ಅಕ್ಕಿ	ಸರ್ವಜ್ಞನಗರ ದಪಶದಪಲ್ಲಿ	ಜಕಂದ್ರಕೇಖರ ಶಾಸ್ತ್ರಿ ಬಿನ್ ಶ್ರೀಕಂಠಶಾಸ್ತ್ರಿ	..	ರೂ. ..	ಆ. ..	ಪೈ. .	ಸೈನ್ಯರ ಆನಾಂ ಹೊರಪಡಿನ ಪೂರು ಗ್ರಾಮದ	ಖುಷ್ಕಿ ತರೀ ಪರಂಪೋಕು ತರೀ ಬಾಗಾಯತು	67 24 74 13 180 34 10 22	333 13	1273	0	0	658	0	9

ಹರಾಜು ತಾರೀಖು ವರಿಗೆ ಬಡ್ಡಿ ಬರಬೇಕು.

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಪಿ. ಪಂಚನಾಥರಾವ್,
ಸಬ್ ಡಿವಿಜ್ ಆಫಿಸರ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟ್‌ನಲ್ಲಿ.

ಸ್ ೧೮೯೫—೯೬ನೇ ಇಸವಿ ಅರ್ಜೀ ನಂಬರ್ 469.

ಮೃತಪಟ್ಟ ನಲ್ಲೂರು ರಂಗರಾಯರವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ನಲ್ಲೂರು ನಾರಾಯಣರಾಯರು, ಮೃತಪಟ್ಟ ಸದರೀ ರಂಗರಾಯರಿಗೆ ಸಹೋದರ ಆಗಬೇಕೆಂಬ ಹಕ್ಕುದಾರಿ ಮೇಲೆ ಹಾಸನದ ಸ್ಥಳದ ಸದರೀ ನಾರಾಯಣರಾಯರು, ಸದರೀ ವಾಸಸ್ಥರಾಗಿ ಮೃತಪಟ್ಟ ರಂಗರಾಯರವರ ಜಿಂದಗಿ ಬಗ್ಯಾಗಿ ಬರತಕ್ಕ 10,000 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಾರಾಯಣರಾಯರ ಅರ್ಜಿಯನ್ನು ಸ್ ೧೮೯೬ನೇ ಇಸವಿ ಜುಲೈ ತಿಂಗಳ ತಾರೀಖು 6ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಂಗರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ ೧೮೯೬ನೇ ಇಸವಿ ಜೂನ್ ತಿಂಗಳ 16ನೇ ತಾರೀಖಿನಲ್ಲಿ ಕೋರ್ಟ್ ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಶಿವಮೊಗ್ಗ ಡಿಸ್ಟ್ರಿಕ್ಟ್.

ಇ ಸ್ಟ್ ಹಾ ರ್ ನಾ ಮೆ .

ತಾರೀಖು 5ನೇ ಜೂನ್ 1896ನೇ ಇಸವಿ.

ಇದರಿಂದ ಸಕಲ ಜನಗಳಿಗೂ ತಿಳಿಯಪಡಿಸುವದೇನಂದರೆ:—

ಈ ಕೆಳಗೆ ನಮೂದಿಸುವ ಸಂದಲ್ ಕೋಠಿಗಳಿಗೆ ಅವುಗಳ ಬಾಜೂದಲ್ಲಿ ಕಾಣಿಸಿರುವ ತಾಲ್ಲೂಕಿನ ಹೋಬಳಿಗಳಿಂದ ವಣ ಸಂದಲ್ ಮರಗಳು ಮತ್ತು ಹೊಂಭಸಿ ಎಂದು ಕರಿಯಲ್ಪಡುವ ಪ್ಲೀಣ ಹೊಂದುತ್ತಾ ಇರುವ ಬಲಿತ ಸಂದಲ್ ಮರಗಳು, ಮತ್ತು ನೆಲದಲ್ಲಿ ಬಿಟ್ಟು ಇರುವ ಬೇರುಗಳು, ಬೇರು ಸಹಿತ ಕೀಳಿಸಿ ಬೀ ಮರ ಕಾಮುಗಾರಿಯಿಂದ 1896ನೇ ಇಸವಿ ಅಕ್ಟೋಬರು 31ನೇ ತಾರೀಖಿನೊಳಗೆ ಕೋಠಿಗೆ ರವಾನಿಸಿ ಕೊಡುವದಕ್ಕೆ ಕಂಟ್ರಾಕ್ಟು ದರಖಾಸ್ತುಗಳು ಅಂಗೀಕರಿಸಲ್ಪಡುತ್ತೆ.